ಎಂದರಂತೆ. ಅರವಿಂದ ವಿಚಲಿತನಾದಂತೆ ಕಾಣಲಿಲ್ಲ. ಬೇರೆ ಮನೆ ಬಾಡಿಗೆ ಹಿಡಿದು ಎಂದಿನಂತಿದ್ದ. ಪಕ್ಕದ ಊರ ಬ್ರಾಂಚ್‌ಗೆ ವರ್ಗಾವಣೆಯಾದ್ರೂ ಅರವಿಂದ ಇದೇ ಊರಲ್ಲಿದ್ದ. ಎರಡು ವರ್ಷಗಳು ಗೊಂದಲದಲ್ಲಿ ಕಳೆದವು.

ನಮ್ಮ ಕಾಲೇಜಿಗೆ ವರ್ಗವಾಗಿ ಬಂದ ಮನೋಹರ ಅವಿವಾಹಿತ, ಇಂಗ್ಲಿಷ್ ಉಪನ್ಯಾಸಕ. ಕಾಲೇಜಿನಲ್ಲಿ ಅನೇಕ ಕೆಲ್ಸಗಳನ್ನು ಒಟ್ಟಿಗೆ ಮಾಡುವುದು ಬಂತು. ಹತ್ತಿರವಾದೆವು. ಮದುವೆ ಬಂಧನ ಬೇಡ! ಮುಕ್ತವಾಗಿ ಜತೆಗೆ ಇರೋಣ ಎಂಬ ಮಾತುಕತೆಯ ಮೇಲೆ ಜತೆಯಾದೆವು. ಇಲ್ಲಿಯವರೆಗೆ ಅಪ್ಪ-ಅಮ್ಮನ ಮನೆಗೆ ಹೋಗುತ್ತಿದ್ದೆ. ಅಪರಾಧಿ ಪ್ರಜ್ಞೆಯಿಂದ ಹೋಗುವುದನ್ನು ನಿಲ್ಲಿಸಿದೆ. ಮನೋಹರನೂ ಬಾಡಿಗೆ ಮನೆಯಲ್ಲೇ ಇದ್ದ. ನನ್ನ ಹಿಂದಿನ ಸಂಬಂಧವೇನೂ ಮನೋಹರನಿಗೆ ಕಾಡಿದಂತೆ ಕಾಣಲಿಲ್ಲ. ಮದುವೆ ಬಗ್ಗೆ ಮಾತೂ ತೆಗೆಯಲಿಲ್ಲ. ಮದುವೆ ಮಾತು ತೆಗೆದಿದ್ದರೆ ನಾನು ತುದಿಗಾಲ ಮ್ಯಾಲೆ ನಿಂತಿದ್ದೆ. ಧೈರ್ಯ ಮಾಡಿ 'ಮದುವೆ ಆಗೋಣ' ಅಂದೆ. ಮೌನವಾದರು, ಆ ಮೌನವನ್ನು ಮುರಿಯಲು ಪ್ರಯತ್ನಿಸಿದೆ. ಆಗಲಿಲ್ಲ.

ವಿಧಿಯಾಟವನ್ನು ಬಲ್ಲವರಿಲ್ಲ. ಅರವಿಂದ-ನಾನು ಮತ್ತೆ ಸಮೀಪವಾಗತೊಡಗಿದ್ದೆವು. ಅರವಿಂದ ಬದಲಾಗಿರಲಿಲ್ಲ. ನಾನೇ ಅವನತ್ತ ಸರಿಯತೊಡಗಿದೆ. ಯಾರ ಅಡ್ಡಿಯೂ ಇರಲಿಲ್ಲ. ಈ ನಡುವೆ ನನಗೇ ವರ್ಗಾವಣೆ ಆಯಿತು. ಐವತ್ತು ಕಿ.ಮೀ. ದೂರದ ಗ್ರಾಮೀಣ ಪ್ರದೇಶದಲ್ಲಿ ಹೊಸದಾಗಿ ಸ್ಥಾಪನೆಯಾದ ಪದವಿ ಕಾಲೇಜಿಗೆ. ನಿತ್ಯ ಓಡಾಡುವುದು ನಡೆಯಿತು. ಆದರೂ ಕಾಲೇಜಿರುವ ಊರಲ್ಲಿ ಮನೆ ಬಾಡಿಗೆ ಹಿಡಿದಿದ್ದೆ. ನನ್ನ ಹಣೆ ಬರಹದಲ್ಲಿ ಬರೆದಿತ್ತೋ ಏನೋ ಅರವಿಂದ ಹತ್ತಿರವಾದರೂ ಮನೋಹರ ಬದಲಾಗಲಿಲ್ಲ. ನನ್ನ ಅಂತರಂಗಕ್ಕೆ ಮುಳ್ಳು ಮುರಿದಂತೆ ಆಯಿತು. ಅರವಿಂದ ಹೊಸ ಊರಿಗೆ ಬರುತ್ತಿದ್ದ, ವಾರದಲ್ಲಿ ಎರಡು ಸಲ. ನನ್ನ ಸ್ವಂತ ಮನೆಗೆ ಮನೋಹರ ಆಗಾಗ ಬರುತ್ತಲೇ ಇದ್ದ. ನನ್ನ ಸ್ಥಿತಿಯನ್ನು ನಾನು ಬಿಡಿಸಿ ಯಾರಿಗೂ ಹೇಳಲಿಲ್ಲ. ಮನಃಸ್ತಾಪಗಳೂ ನಡೆಯಲಿಲ್ಲ. ಈ ಅಕ್ರಮ ಸಂಬಂಧಗಳ ಉಳಿಯಲ್ಲಿದ್ದಾಗಲೇ ಅಮ್ಮ ತೀರಿಕೊಂಡದ್ದು. ಐದಿನೈದು ದಿನ ರಜೆ ಹಾಕಿ ಅಮ್ಮನನ್ನ ಮಣ್ಣು ಮಾಡಿ ಅಪ್ಪನ ಜತೆಗಿದ್ದೆ. ತಾನಾಗಿಯೇ ಅಪ್ಪ ನನ್ನನ್ನು ಮಾತಾಡಿಸುತ್ತಿರಲಿಲ್ಲ. ಚಹ, ನಾಸ್ತಾ, ಊಟ ಒದಗಿಸುವಾಗ ಮಾತ್ರ ಮಾತುಗಳು. ಸಿಡುಕು, ಚಡಪಡಿಕೆ ಕಮ್ಮಿಯಾಗಿತ್ತು. ಅಮ್ಮನನ್ನು ಇಷ್ಟು ಹಚ್ಚಿಕೊಂಡಿದ್ದನೇ ಅಪ್ಪ ಅನ್ನಿಸಿತು.

ಅಮ್ಮ ಸತ್ತ ಎರಡು ವರ್ಷದಲ್ಲಿ ಅಪ್ಪ ವಯೋಸಹಜ ನಿವೃತ್ತಿಯಾದ! ಅದಾಗಿ ಒಂದೂವರೆ ವರ್ಷವೂ ಅಪ್ಪ ಉಳಿಯಲಿಲ್ಲ. ಆರೋಗ್ಯವೇ ಅಪ್ಪನನ್ನು ಹುಡುಕಿಕೊಂಡು ಬಂದು ನೆಲೆಗೊಂಡಿತ್ತು ಅನ್ನುವಂಗಿದ್ದ. ಅಂಥ ಅಪ್ಪ ತೀರಿಕೊಂಡಾಗ ನಾನು ಚಿಂತಾಕ್ರಾಂತಳಾದೆ...

ಅಪ್ಪ ಆತ್ಮಚರಿತ್ರೆಯಲ್ಲಿ ನನ್ನ ನಿಜ ಬಾಳ್ವೆಯನ್ನೇ ಬರೆದಿದ್ದ. ಒಬ್ಬ ಪುರುಷನಿಗೆ ಇಬ್ಬರು ಹೆಂಡರಿರುವುದನ್ನು ಕಂಡಿದ್ದೇನೆ. ಮಹಿಳೆಗೆ ಇಬ್ಬರು ಪುರುಷರು ಗಂಡಂದಿರಾಗಿ ಇರುವುದನ್ನು ನಮ್ಮ ಕಾಲದಾಗ ಕಂಡಿರಲಿಲ್ಲ... ವೇದವತಿಗೆ ದುಃಖ ಒತ್ತಿ ಬಂತು. ಅಪ್ಪ ಬರೆದಿದ್ದ ಸಾಲುಗಳು ಎದೆಯಲ್ಲಿ ಮೂಡಿ, ಹೃದಯವೇ ಓದುತ್ತಿತ್ತು; ಹಾಡುತ್ತಿತ್ತು. ಎದ್ದು ನೀರು ಕುಡಿದಳು. ಗುರುರಾಜನಿಗೆ ತೋರಿಸದೇ, ಹೇಳದೇ ವೇದವತಿ ಅಪ್ಪನ ಆತ್ಮಚರಿತ್ರೆಯಲ್ಲಿದ್ದ ತನಗೆ ಕಳಂಕ ತರುವುದನ್ನೆಲ್ಲ ತೆಗೆದು ಹಾಕಿದ್ದಳು. ತನ್ನ, ಅರವಿಂದ ಸಂಬಂಧವನ್ನು ಮಾತ್ರ ಕಾಣಿಸಿದ್ದಳು. ತಿದ್ದುಪಡಿ ಮಾಡಿದ್ದನ್ನೇ ಓದಿ ಓದಿ ಯಾವ ಅನುಮಾನಗಳಿಗೆ ಎಡೆಯಿಲ್ಲದಂತೆ ಸರಿಪಡಿಸಿದ್ದಳು. ಸ್ವಲ್ಪ ನೆಮ್ಮದಿ ಅನುಭವಿಸಿದಂತೆ ಕಂಡರೂ ಅಪ್ಪನ ಪ್ರಾಮಾಣಿಕತೆ, ನಿಷ್ಠುರತನ ಕಂಡು ದಂಗು ಬಡಿದಂತಾಗಿತ್ತು. ಆತ್ಮಚರಿತ್ರೆಯಲ್ಲಿ ತಿದ್ದಿ ಸರಿಪಡಿಸಿದ್ದಳೇ ಹೊರತು ನಿಜ ಬದುಕಿನಲ್ಲಿ ಇನ್ನೂ ಹಾಗೆ ಉಳಿದಿತ್ತು. ಸರಿಪಡಿಸಿಕೊಳ್ಳಲು ಯೋಚಿಸಿದಂತೆ ಆಯ್ಕೆಯ ಗೊಂದಲ ಹೆಚ್ಚಾಯಿತು. ಅರವಿಂದ ನಿರ್ದೋಷಿ! ಮನೋಹರನ ಕೇಡಿಲ್ಲದ ಪ್ರೀತಿಯ ಸಂಬಂಧವಿತ್ತು!

ಇಷ್ಟಾದ ಮೇಲೆ ವೇದವತಿ ಶಿವದೇವಿಯ ಮುಂದೆ ಸಣ್ಣವಳಾಗಿ ನಿಂತಳು..

ಮೊಬೈಲ್ ರಿಂಗಾಯ್ತು...

'ಹ್ಞಾಂ ಅಂಕಲ್ ಹೇಳ್ರಿ ನಾನು ವೇದ'

'ಬೆಳಗ್ಗೆ ಬಸ್ಸು ಏಳಕ್ಕೆ ಬಸ್ ನಿಲ್ದಾಣಕ್ಕೆ ಬರುತ್ತದೆ. ಹುಡುಗನನ್ನು ಕಳಿಸು ತಾಯಿ'

'ನಿಶ್ಚಿಂತಿಯಿಂದ ಬರ್ರಿ ಅಂಕಲ್. ಹುಡುಗರು